ಕರ್ನಾಟಕ ಸರ್ಕಾರ

**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ**

**HASSAN INSTITUTE OF MEDICAL SCIENCES, HASSAN.**

(An Autonomous Medical Institution, Government of Karnataka)

SRI CHAMARAJENDRA HOSPITAL CAMPUS, HASSAN-573201.

WEB SITE: www.hims-hassan.org, Phone/Fax No. 08172-231699 /231599 Email:directorhims@yahoo.com

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 12ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

**ದಿನಾಂಕ: 03.11.2015 ರಂದು ಮಂಗಳವಾರ**

**ಮಧ್ಯಾಹ್ನ:12.30 ಗಂಟೆಗೆ**

**ಸ್ಥಳ: ವಿಕಾಸ ಸೌಧ, ಬೆಂಗಳೂರು.**

**ಕೊಠಡಿ ಸಂಖ್ಯೆ: 218. 2ನೇ ಮಹಡಿ**

ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN

Website: www.hims-hassan.org Phone/Fax No.08172-231699, 231599, Email:directorhims@yahoo.com


# 12ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 12ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:03-11-2015 ರಂದು ಮಂಗಳವಾರ ಮಧ್ಯಾಹ್ನ:12-30 ಗಂಟೆಗೆ ಕೊಠಡಿ ಸಂಖ್ಯೆ:218, 2ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ: 10**

| | | | |
|---|---|---|---|
| 01 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 03 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 04 | ಮಾನ್ಯ ಸರ್ಕಾರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 05 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 06 | ಮಾನ್ಯ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 07 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 08 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 09 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

Finance Officer
Hassan Institute of Medical Sciences
HASSAN

3/11

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
| --- | --- | --- |
| 1 | ದಿನಾಂಕ:05-06-2015 ರಂದು ನಡೆದ 11ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:05-06-2015 ರಂದು ನಡೆದ 11ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 2 | ದಿನಾಂಕ:03-11-2015 ರಂದು ನಡೆದ 8ನೇ ಕಾಮಗಾರಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅಂಗೀಕರಿಸುವುದು. | ದಿನಾಂಕ: 03-11-2015 ರಂದು ನಡೆದ 8ನೇ ಕಾಮಗಾರಿ ಸಮಿತಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತಗೆದುಕೊಂಡ ನಿರ್ಣಾಯಗಳ ಸಭಾ ನಡವಳಿಗಳನ್ನು ಸಭೆಯಲ್ಲಿ ಓದಿ ಅನುಮೋದಿಸಲಾಯಿತು. |
| 3 | ಹಳೆ ಆಸ್ಪತ್ರೆ ಕಟ್ಟಡದ ಐ.ಸಿಯು/ ಎನ್.ಐ.ಸಿ.ಯು ಮತ್ತು ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಹೆಚ್ಚುವರಿಯಾಗಿ 125 ಕೆ.ವಿ.ಎ. ಜನರೇಟರ್ ಖರೀದಿಸುವ ಬಗ್ಗೆ. | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಎಮ್.ಎಮ್.ಆರ್. ಸಭೆಯಲ್ಲಿ ಆಸ್ಪತ್ರೆಗಳಲ್ಲಿ ವಿದ್ಯುತ್ ವ್ಯತ್ಯಯವಾದ ಸಂದರ್ಭದಲ್ಲಿ ಶಸ್ತ್ರ ಚಿಕಿತ್ಸೆ, ಐ.ಸಿ.ಯು, ಎನ್.ಐ.ಸಿ.ಯು ಹಾಗೂ ಇತರೆ ಅತಿ ಅವಶ್ಯಕ ಸ್ಥಳಗಳಲ್ಲಿ ರೋಗಿಗಳ ಚಿಕಿತ್ಸೆಗೆ ಯಾವುದೇ ಅನಾನೂಕೂಲವಾಗದಂತೆ ನೋಡಿಕೊಳ್ಳಲು ಹೆಚ್ಚುವರಿಯಾಗಿ ಒಂದು ಜನರೇಟರ್ ಅನ್ನು ಅಳವಡಿಸಿಕೊಳ್ಳುವಂತೆ (ಸ್ಟ್ಯಾಂಡ್ ಬೈ) ನಿರ್ದೇಶಿಸಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.<br>ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನರವರು 125 ಕೆ.ವಿ.ಎ. ಜನರೇಟರ್ ಖರೀದಿಗೆ ರೂ.10.50ಲಕ್ಷಗಳು ಮತ್ತು ಜನರೇಟರ್‌ನಿಂದ ವಿದ್ಯುತ್ ಸಂಪರ್ಕಕ್ಕಾಗಿ ಯು.ಜಿ.ಕೇಬಲ್, ಜನರೇಟರ್ ಪ್ಲ್ಯಾಟ್‌ಫಾರಂ ಮತ್ತು ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ರೂ.2.10 ಲಕ್ಷಗಳು ಸೇರಿದಂತೆ ಒಟ್ಟು ಕಾಮಗಾರಿಗಳ ಅಂದಾಜು ಮೊತ್ತ ರೂ.12,60 ಲಕ್ಷಗಳಿಗೆ ಸಲ್ಲಿಸಿರುವ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಹಳೆ ಆಸ್ಪತ್ರೆ ಕಟ್ಟಡಕ್ಕೆ ಹೆಚ್ಚುವರಿಯಾಗಿ ಜನರೇಟರ್ ಖರೀದಿಸುವುದೆಂದು ತೀರ್ಮಾನಿಸಲಾಯಿತು. ಈ ವೆಚ್ಚವನ್ನು ಸಂಸ್ಥೆಯ ಯುಸ್ಸರ್ ನಿಧಿಯಲ್ಲಿ ಭರಿಸಲು ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಕ್ಕೈಗೊಳ್ಳಲಾಯಿತು. |
| 4 | ಹೊಸ ಆಸ್ಪತ್ರೆ ಕಟ್ಟಡದ ಐ.ಸಿಯು / ಎನ್.ಐ.ಸಿ.ಯು ಮತ್ತು ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಹೆಚ್ಚುವರಿಯಾಗಿ 160ಕೆ.ವಿ.ಎ. ಜನರೇಟರ್ ಖರೀದಿಸುವ ಬಗ್ಗೆ. | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಎಮ್.ಎಮ್.ಆರ್. ಸಭೆಯಲ್ಲಿ ಆಸ್ಪತ್ರೆಗಳಲ್ಲಿ ವಿದ್ಯುತ್ ವ್ಯತ್ಯಯವಾದ ಸಂದರ್ಭದಲ್ಲಿ ಶಸ್ತ್ರ ಚಿಕಿತ್ಸೆ, ಐ.ಸಿ.ಯು, ಎನ್.ಐ.ಸಿ.ಯು ಹಾಗೂ ಇತರೆ ಅತಿ ಅವಶ್ಯಕ ಸ್ಥಳಗಳಲ್ಲಿ ರೋಗಿಗಳ ಚಿಕಿತ್ಸೆಗೆ ಯಾವುದೇ ಅನಾನೂಕೂಲವಾಗದಂತೆ ನೋಡಿಕೊಳ್ಳಲು ಹೆಚ್ಚುವರಿಯಾಗಿ ಒಂದು ಜನರೇಟರ್ ಅನ್ನು ಅಳವಡಿಸಿಕೊಳ್ಳುವಂತೆ (ಸ್ಟ್ಯಾಂಡ್ ಬೈ) ನಿರ್ದೇಶಿಸಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.<br>ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನರವರು 160 ಕೆ.ವಿ.ಎ. ಜನರೇಟರ್ ಖರೀದಿಗೆ ರೂ.15.00ಲಕ್ಷಗಳು ಮತ್ತು ಜನರೇಟರ್‌ನಿಂದ ವಿದ್ಯುತ್ |



Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸಂಪರ್ಕಕ್ಕಾಗಿ ಯು.ಜಿ.ಕೇಬಲ್, ಜನರೇಟರ್ ಪ್ಲಾಟ್‌ಫಾರಂ ಮತ್ತು ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ರೂ.3.50 ಲಕ್ಷಗಳು ಸೇರಿದಂತೆ ಒಟ್ಟು ಕಾಮಗಾರಿಗಳ ಅಂದಾಜು ಮೊತ್ತ ರೂ.18,50 ಲಕ್ಷಗಳಿಗೆ ಸಲ್ಲಿಸಿರುವ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಹೊಸ ಆಸ್ಪತ್ರೆ ಕಟ್ಟಡಕ್ಕೆ ಹೆಚ್ಚುವರಿಯಾಗಿ ಜನರೇಟರ್ ಖರೀದಿಸುವುದೆಂದು ತೀರ್ಮಾನಿಸಲಾಯಿತು. ಈ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಲ್ಲಿ ಭರಿಸಲು ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಕ್ಕೈಗೊಳ್ಳಲಾಯಿತು. |
| 5 | ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹೊಳೆನರಸೀಪುರಕ್ಕೆ 62.5ಕೆ.ವಿ.ಎ ಸಾಮರ್ಥ್ಯದ ಒಂದು ಜನರೇಟರ್ ಖರೀದಿಸಲು ಅನುಮತಿ ನೀಡುವ ಬಗ್ಗೆ. | ಹಿಮ್ಸ್ ಸಂಸ್ಥೆಯ ಅಧೀನದಲ್ಲಿ ಬರುವ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹೊಳೆನರಸೀಪುರ ಈ ಸಂಸ್ಥೆಯಲ್ಲಿ ಬೇಸಿಕ್ ಬಿಎಸ್‌ಸಿ(ನ), ಪಿಬಿಎಸ್‌ಸಿ(ನ) ಮತ್ತು ಎಂಎಸ್‌ಸಿ(ನ) ಕೋರ್ಸ್‌ಗಳು ನಡೆಯುತ್ತಿದ್ದು ಸಂಸ್ಥೆಯ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಯು ನರ್ಸಿಂಗ್ ಪರೀಕ್ಷಾ ಕೇಂದ್ರವಾಗಿದ್ದು, ಪರೀಕ್ಷಾ ಸಮಯದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿದ್ಯುನ್ಮಾನದ ಮುಖಾಂತರ ಡೌನ್ ಲೋಡ್ ಮಾಡಿಕೊಂಡು ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾರ್ಥಿಗಳಿಗೆ ವಿತರಿಸಬೇಕಾಗಿರುತ್ತದೆ. ಈ ಸಂಸ್ಥೆಯು ಗ್ರಾಮಾಂತರ ಪ್ರದೇಶದಲ್ಲಿದ್ದು, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ತುಂಬಾ ತೊಂದರೆಯಾಗಿರುತ್ತಿರುವುದರ ಬಗ್ಗೆ ಚರ್ಚಿಸಲಾಯಿತು.<br>ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನರವರು 62.5 ಕೆ.ವಿ.ಎ. ಜನರೇಟರ್ ಖರೀದಿಗೆ ರೂ.8.00ಲಕ್ಷಗಳು ಮತ್ತು ಜನರೇಟರ್‌ನಿಂದ ವಿದ್ಯುತ್ ಸಂಪರ್ಕಕ್ಕಾಗಿ ಯು.ಜಿ.ಕೇಬಲ್, ಜನರೇಟರ್ ಪ್ಲಾಟ್‌ಫಾರಂ ಮತ್ತು ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ರೂ.2.50 ಲಕ್ಷಗಳು ಸೇರಿದಂತೆ ಒಟ್ಟು ಕಾಮಗಾರಿಗಳ ಅಂದಾಜು ಮೊತ್ತ ರೂ.10.50 ಲಕ್ಷಗಳಿಗೆ ಸಲ್ಲಿಸಿರುವ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ವಿದ್ಯಾರ್ಥಿಗಳು ಮತ್ತು ಪರೀಕ್ಷಾ ಹಿತದೃಷ್ಟಿಯಿಂದ ಜನರೇಟರ್ ಖರೀದಿಸುವುದೆಂದು ತೀರ್ಮಾನಿಸಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಕ್ಕೈಗೊಳ್ಳಲಾಯಿತು. |
| 6 | ಹೊಸ ಆಸ್ಪತ್ರೆ ಕಟ್ಟಡದಲ್ಲಿ ನಿರ್ಮಿಸಿರುವ ಅಡುಗೆ ಮನೆಗೆ 750 ರೋಗಿಗಳಿಗೆ ಊಟದ ವ್ಯವಸ್ಥೆ ಕಲ್ಪಿಸಲು ಅನುಕೂಲವಾಗುವಂತೆ ಹೆಚ್ಚುವರಿಯಾಗಿ | ಸಂಸ್ಥೆಯ ಹಳೆ ಆಸ್ಪತ್ರೆಯಲ್ಲಿ 400 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಸಾರವಾಗಿ ಅಡುಗೆ ಪರಿಕಾರಗಳನ್ನು ಖರೀದಿಸಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಇದೀಗ ಹೊಸ ಆಸ್ಪತ್ರೆ ಮತ್ತು ಹಳೆ ಆಸ್ಪತ್ರೆ ಎರಡು ಸೇರಿ 750 ಹಾಸಿಗೆಗಳ ಸಾಮರ್ಥ್ಯಕ್ಕೆ ವಿಸ್ತಾರವಾಗಿದ್ದು |

Finance Officer
Hassan Institute of Medical Sciences
HASSAN

3/11/11

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಅವಶ್ಯಕವಿರುವ ಅಡುಗೆ ಪರಿಕಾರಕಗಳನ್ನು ಖರೀದಿಸುವ ಬಗ್ಗೆ. | ಸುಮಾರು 750 ರೋಗಿಗಳಿಗೆ ಊಟದ ವ್ಯವಸ್ಥೆ ಮಾಡಲು ಹೆಚ್ಚುವರಿಯಾಗಿ ಅಡುಗೆ ಪರಿಕರಗಳು ಅವಶ್ಯಕತೆ ಇರುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಪರಿಣಿತರನ್ನು ಕರೆಸಿ ಅಡುಗೆ ಮನೆಯ ಸ್ಥಳ ಪರಿಶೀಲನೆ ಮಾಡಿಸಿ ಹಾಲಿ ಇರುವ ಅಡುಗೆ ಪರಿಕರಗಳ ಜೊತೆಗೆ ಹೆಚ್ಚುವರಿಯಾಗಿ ಅಗತ್ಯವಿರುವ ಪರಿಕರಗಳ ವಿವರ ಮತ್ತು ಅಂದಾಜು ಪಟ್ಟಿಯನ್ನು ಪಡೆಯಲಾಗಿದ್ದು ಸದರಿಯವರು ಮಾರುಕಟ್ಟೆ ದರಕ್ಕೆ ಸಮೀಪವಾಗಿ ರೂ.10,25,660.00 ಗಳಿಗೆ ಅಂದಾಜುಪಟ್ಟಿ ನೀಡಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಅಡುಗೆ ಮನೆಗೆ ಹೆಚ್ಚುವರಿಯಾಗಿ ಅಗತ್ಯವಿರುವ ಪರಿಕರಗಳನ್ನು ಇ–ಟೆಂಡರ್ ಮೂಲಕ ನಿಯಮಾನುಸಾರ ಖರೀದಿಸಲು ಒಪ್ಪಿ ಸದರಿ ವೆಚ್ಚವನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸಲು ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಕ್ಕೈಗೊಳ್ಳಲಾಯಿತು. |
| 7 | ಹೊಸ ಆಸ್ಪತ್ರೆ ಕಟ್ಟಡಕ್ಕೆ ನೆಟ್ ವರ್ಕಿಂಗ್ ಅಳವಡಿಕೆ ಕಂಪ್ಯೂಟರ್–15, ಲೇಸರ್ ಪ್ರಿಂಟರ್–06, ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್ಸ್–06, ಟವರ್ ಸರ್ವರ್–01, ಸಾಫ್ಟ್ ವೇರ್ ಮತ್ತು ನೆಟ್‌ವರ್ಕಿಂಗ್ ಅಳವಡಿಕೆ ಬಗ್ಗೆ. | ಸಂಸ್ಥೆಯ ಹಳೆ ಆಸ್ಪತ್ರೆ ಕಟ್ಟಡದಿಂದ ಹೊಸ ಆಸ್ಪತ್ರೆ ಕಟ್ಟಡಕ್ಕೆ 2 ವಿಭಾಗಗಳನ್ನು ಹೊರತುಪಡಿಸಿ(ಪ್ರಸೂತಿ ಮತ್ತು ಸ್ತ್ರೀರೋಗ ಮತ್ತು ಮಕ್ಕಳ ವಿಭಾಗ) ಉಳಿದ ಎಲ್ಲಾ ವಿಭಾಗಗಳನ್ನು ಹೊಸ ಆಸ್ಪತ್ರೆ ಕಟ್ಟಡಕ್ಕೆ ಸ್ಥಳಾಂತರ ಮಾಡಿ ನವೆಂಬರ್ 2ನೇ ವಾರದಲ್ಲಿ ಸಾರ್ವಜನಿಕರ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹೊಸ ಆಸ್ಪತ್ರೆ ಕಟ್ಟಡಕ್ಕೆ ನೆಟ್ ವರ್ಕಿಂಗ್ ವ್ಯವಸ್ಥೆ ಅಳವಡಿಸುವ ಬಗ್ಗೆ ತಾಂತ್ರಿಕ ಪರಿಣಿತರನ್ನು ಕರೆಸಿ ಸ್ಥಳ ಪರಿಶೀಲನೆ ನಡೆಸಿದ್ದು ಸದರಿ ನೆಟ್ ವರ್ಕಿಂಗ್ ಅಳವಡಿಕೆಗೆ ಸಲ್ಲಿಸಿರುವ ರೂ.24.00 ಲಕ್ಷ ಅಂದಾಜು ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ನೆಟ್ ವರ್ಕಿಂಗ್ ಅಳವಡಿಕೆಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ನೆಟ್‌ವರ್ಕಿಂಗ್ ವ್ಯವಸ್ಥೆಯನ್ನು ಎನ್.ಐ.ಸಿ. ಸಂಸ್ಥೆಯ ಮುಖಾಂತರ ಮಾಡಿಸುವುದರಿಂದ ಸಂಸ್ಥೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ, ಎನ್.ಐ.ಸಿ ವಿಭಾಗವು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುವುದರಿಂದ ಮತ್ತು ಜಿಲ್ಲಾಧಿಕಾರಿಗಳು ಸಂಸ್ಥೆಯ ಸದಸ್ಯರಾಗಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ನೆಟ್ ವರ್ಕಿಂಗ್ ಅಳವಡಿಕೆ ಬಗ್ಗೆ ಚರ್ಚಿಸಿ ಎನ್.ಐ.ಸಿ ಸಂಸ್ಥೆಗೆ ಜಿಲ್ಲಾಧಿಕಾರಿಗಳ ನೆರವಿನಿಂದ ಶಿಫಾರಸ್ಸು ಮಾಡಿಸಿ ಅಗತ್ಯ ಕೆಲಸವನ್ನು ಮಾಡಿಸಿಕೊಳ್ಳುವುದೆಂದು ತೀರ್ಮಾನಿಸಿ ಇದರ ಬಗ್ಗೆ |

Finance Officer
Hassan Institute of Medical Sciences
HASSAN

3/11/15

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.<br>ಸಂಸ್ಥೆಯ ನಿರ್ದೇಶಕರು ಈ ವಿಷಯವಾಗಿ ಈಗಾಗಲೇ ಎನ್.ಐ.ಸಿಯವರಿಗೆ ಹಲವಾರು ಬಾರಿ ಪತ್ರ ಬರೆಯಲಾಗಿದ್ದರು ಸದರಿ ಸಂಸ್ಥೆಯವರು ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ ನವೆಂಬರ್ 2ನೇ ವಾರದಲ್ಲೇ ಹೊಸ ಆಸ್ಪತ್ರೆಯ ದೈನಂದಿನ ಕಾರ್ಯ ಚಟುವಟಿಕೆಗಳು ಪ್ರಾರಂಭವಾಗುವುದರಿಂದ ಅತಿ ಅವಶ್ಯಕವಾಗಿ ನೆಟ್ ವರ್ಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಬಹುಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸಂಸ್ಥೆಯ ಹಂತದಲ್ಲಿಯೇ ಟವರ್ ಸರ್ವರ್ ಉಪಕರಣವನ್ನು ಡಿ.ಜಿ.ಎಸ್.&ಡಿ ದರದಲ್ಲಿ ಖರೀದಿಸಲು ಅನುಮತಿ ನೀಡಿದ್ದಲ್ಲಿ ತಾತ್ಕಾಲಿಕವಾಗಿ ಸದರಿ ವ್ಯವಸ್ಥೆಯನ್ನು ಕೈಗೊಂಡು ಮುಂದಿನ ದಿನಗಳಲ್ಲಿ ಎನ್.ಐ.ಸಿ ಸಂಸ್ಥೆಯ ಮುಖಾಂತರ ಪೂರ್ಣ ಪ್ರಮಾಣದಲ್ಲಿ ನೆಟ್ ವರ್ಕಿಂಗ್ ಸೌಲಭ್ಯವನ್ನು ಅಳವಡಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ಮನವರಿಕೆ ಮಾಡಿದರು.<br>ಆಸ್ಪತ್ರೆಯ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಸದರಿ ಉಪಕರಣವು ಅತಿ ಅವಶ್ಯವೆಂದು ಪರಿಗಣಿಸಿ ಸದರಿ ಉಪಕರಣವನ್ನು ಡಿ.ಜಿ.ಎಸ್&ಡಿ ದರದಲ್ಲಿ ರೂ 2.00 ಲಕ್ಷಗಳ ವೆಚ್ಚದಲ್ಲಿ ಮಾತ್ರ ಖರೀದಿಸಲು ಅನುಮತಿ ನೀಡಿ ಉಳಿದ ಕೆಲಸಗಳನ್ನು ಎನ್.ಐ.ಸಿ ಮುಖಾಂತರ ಮಾಡಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು. |
| 8 | ಸಂಸ್ಥೆಯ ವೈದ್ಯಕೀಯ ದಾಖಲೆಗಳನ್ನು ಗಣಕೀಕೃತಗೊಳಿಸಲು ಅನುಕೂಲವಾಗುವಂತೆ ಮೆಡಿಕಲ್ ರೆಕಾರ್ಡ್ ವಿಭಾಗಕ್ಕೆ ಸಾಫ್ಟ್ ವೇರ್ ಅಳವಡಿಕೆ ಬಗ್ಗೆ. | ಸಂಸ್ಥೆಯ ವೈದ್ಯಕೀಯ ದಾಖಲೆಗಳನ್ನು ಗಣಕೀಕೃತಗೊಳಿಸಲು ಅನುಕೂಲವಾಗುವಂತೆ ಮೆಡಿಕಲ್ ರೆಕಾರ್ಡ್ ವಿಭಾಗಕ್ಕೆ ಸಾಫ್ಟ್ ವೇರ್ ಅಳವಡಿಸುವ ಬಗ್ಗೆ ಚರ್ಚಿಸಿ ಈ ವ್ಯವಸ್ಥೆಯನ್ನು ಸಹ ಎನ್.ಐ.ಸಿ ಸಂಸ್ಥೆಯ ಮುಖಾಂತರ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು. |
| 9 | ಸಂಸ್ಥೆಯ ಆಸ್ಪತ್ರೆ ಕಟ್ಟಡದಲ್ಲಿ ಶುಚಿತ್ವವನ್ನು ಕಾಪಾಡುವ ನಿಟ್ಟಿನಲ್ಲಿ ಸ್ವಚ್ಛತೆಗಾಗಿ 4 ಫ್ಲೋರ್ ಕ್ಲೀನಿಂಗ್ ಯಂತ್ರವನ್ನು ಖರೀದಿಸುವ ಬಗ್ಗೆ. | ಸಂಸ್ಥೆಯ ಆಸ್ಪತ್ರೆ ಕಟ್ಟಡದಲ್ಲಿ ಶುಚಿತ್ವವನ್ನು ಕಾಪಾಡುವ ನಿಟ್ಟಿನಲ್ಲಿ ಸ್ವಚ್ಛತೆಗಾಗಿ 4 ಫ್ಲೋರ್ ಕ್ಲೀನಿಂಗ್ ಯಂತ್ರವನ್ನು ಖರೀದಿಸುವ ಬಗ್ಗೆ ಚರ್ಚಿಸಲಾಗಿ ಒಂದು ಯಂತ್ರಕ್ಕೆ ಸುಮಾರು ರೂ.2.56 ಲಕ್ಷಗಳ ವೆಚ್ಚ ತಗಲುತ್ತಿದ್ದು ಇದರ ನಿರ್ವಹಣೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದಿದ್ದಲ್ಲಿ ಯಂತ್ರಗಳು ಬಹುಬೇಗ ಹಾಳಾಗುವ ಸಂಭವವಿರುವುದರ ಜೊತೆಗೆ ಇದರ ನಿರ್ವಹಣೆಗೆ ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು ಸಹ ನೇಮಕ ಮಾಡಿಕೊಳ್ಳಬೇಕಾಗಿದ್ದು ಸಂಸ್ಥೆಗೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತದೆಂದು ಚರ್ಚಿಸಿ ಸದರಿ ಯಂತ್ರದ ಸೌಲಭ್ಯವನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವುದೆಂದು ತೀಮಾನಿಸಲಾಯಿತು. ಮುಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಈ ಉಪಕರಣವನ್ನು ಒದಗಿಸುವ ಷರತ್ತಿಗೆ ಒಳಪಟ್ಟು ಇ-ಟೆಂಡರ್ ಪ್ರಕ್ರಿಯೆ ನಡೆಸುವಂತೆ ತೀರ್ಮಾನ ಕೈಗೊಳ್ಳಲಾಯಿತು. |

Finance Officer
Hassan Institute of Medical Sciences
HASSAN

3/11/15

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 10 | ಹೊಸ ಆಸ್ಪತ್ರೆ ಕಟ್ಟಡಕ್ಕೆ ರೋಗಿಗಳು ಮತ್ತು ಸಾರ್ವಜನಿಕರು ಕೂರಲು ಅನುಕೂಲವಾಗುವಂತೆ 3 ಸೀಟರ್ಸ್‌ಗಳ 100 ಖುರ್ಚಿಗಳನ್ನು ಖರೀದಿಸುವ ಬಗ್ಗೆ. | ಹೊಸ ಆಸ್ಪತ್ರೆ ಕಟ್ಟಡದಲ್ಲಿ ಸಾರ್ವಜನಿಕರು ಮತ್ತು ರೋಗಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಆಯಾ ವಿಭಾಗದಲ್ಲಿ ಸ್ಥಳಾವಕಾಶ ಮಾಡಿರುವುದರಿಂದ ಸ್ಟೈನ್‌ಲೆಸ್‌ಸ್ಟೀಲ್ 3 ಸೀಟರ್ಸ್ ಮಾದರಿಯ 100 ಖುರ್ಚಿಗಳನ್ನು ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದೆಂದು ತೀರ್ಮಾನಿಸಲಾಯಿತು. |
| 11 | ಸಾರ್ವಜನಿಕ ರೋಗಿಗಳ ಅನುಕೂಲಕ್ಕಾಗಿ ಆಂಬ್ಯುಲೆನ್ಸ್ ವಾಹನ ಖರೀದಿಸುವ ಬಗ್ಗೆ. | ಸಂಸ್ಥೆಯ ಆಸ್ಪತ್ರೆಯಲ್ಲಿ ಪ್ರಸ್ತುತ ಮೂರು ಆಂಬ್ಯುಲೆನ್ಸ್ ವಾಹನಗಳಿದ್ದು ಸದರಿ ವಾಹನಗಳು ಸುಮಾರು 4.75 ಲಕ್ಷ ಕಿ.ಮೀ ಚಲಿಸಿದ್ದು ಪದೇ ಪದೇ ರಿಪೇರಿಗಳು ಬರುತ್ತಿರುವುದರಿಂದ ತುರ್ತು ಸೇವೆಯಲ್ಲಿ ಯಾವುದೇ ಅಜಾರೂಕತೆಗಳು ಉಂಟಾಗದಂತೆ ಮುಂಜಾಗ್ರತೆ ವಹಿಸಲು ಅತಿ ಅವಶ್ಯಕವಾಗಿ ಒಂದು ಹೊಸ ಆಂಬ್ಯುಲೆನ್ಸ್ ವಾಹನವು ಅವಶ್ಯಕತೆ ಇದ್ದು ವಾಹನದ ಖರೀದಿಗೆ ಸುಮಾರು.ರೂ.16.10 ಲಕ್ಷಗಳಾಗುತ್ತದೆಂದು ಮತ್ತು ಮೃತದೇಹಗಳನ್ನು ಸಾಗಿಸಲು ಸಹ ಒಂದು ವಾಹನ ಅವಶ್ಯಕ ಇರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಾಹನಗಳನ್ನು ಖರೀದಿಸುವ ಬಗ್ಗೆ ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತು ಸೇವೆಗೆ ಅನುಕೂಲವಾಗುವಂತೆ ಒಂದು ಹೊಸ ಆಂಬ್ಯುಲೆನ್ಸ್ ವಾಹನವನ್ನು ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದು ಹಾಗೂ ಹಾಲಿ ಇರುವ ಮೂರು ಆಂಬ್ಯುಲೆನ್ಸ್ ವಾಹನಗಳ ಪೈಕಿ ಒಂದು ವಾಹನವನ್ನು ಸುಸ್ಥಿತಿಯಲ್ಲಿಟ್ಟು ಮೃತದೇಹವನ್ನು ಸಾಗಿಸಲು ಅನುಕೂಲವಾಗುವಂತೆ ಮೀಸಲಿಡುವುದೆಂದು ತೀರ್ಮಾನಿಸಲಾಯಿತು. |
| 12 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಳೆ ಆಸ್ಪತ್ರೆಯ ಆವರಣದಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ಯು.ಜಿ. ಕೇಬಲ್ ಅಳವಡಿಸಿ ದುರಸ್ಥಿ ಮಾಡಿರುವ ಕಾಮಗಾರಿಗಳ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಳೆ ಆಸ್ಪತ್ರೆಯ ಆವರಣದಲ್ಲಿ ಕಡಿಮೆ ಪ್ರಮಾಣದಲ್ಲಿ ಬೀದಿ ದೀಪಗಳನ್ನು ಅಳವಡಿಸಿರುವ ಕಾರಣದಿಂದಾಗಿ ರಾತ್ರಿಯ ವೇಳೆ ಬೆಳಕಿನ ವ್ಯವಸ್ಥೆ ಇಲ್ಲದೆ ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ರಾತ್ರಿ ಪಾಳೆಯದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದನ್ನು ಪರಿಗಣಿಸಿ ಸುರಕ್ಷತೆ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ಕೆಲವೊಂದು ಬೀದಿ ದೀಪಗಳನ್ನು ದುರಸ್ಥಿ ಮಾಡಲು ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನರವರಿಗೆ ಕಾರ್ಯಾದೇಶ ನೀಡಿದ್ದು ಸದರಿ ಇಲಾಖೆಯವರು 2014-15ನೇ ಸಾಲಿನ ವಿದ್ಯುತ್ ಮತ್ತು ಸಿವಿಲ್ ದರಸೂಚಿ ಪ್ರಕಾರ ರೂ.2,97,000.00 ಅಂದಾಜು ಪಟ್ಟಿ ಸಲ್ಲಿಸಿ ನಿಯಮಾನುಸಾರ ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ಸದರಿ ಕೆಲಸದ ಮೊತ್ತವನ್ನು |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 13 | ಹಾಸನ ಜಿಲ್ಲಾ ಚಾಮರಾಜೇಂದ್ರ ಹಳೆ ಆಸ್ಪತ್ರೆಯ ಓ.ಟಿ ಮತ್ತು ಐ.ಸಿಯು ವಿಭಾಗದಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಯು.ಜಿ.ಕೇಬಲ್ ಅಳವಡಿಸುವ ಕೆಲಸ. | ಸಂಸ್ಥೆಯ ಶ್ರೀ ಚಾಮರಾಜೇಂದ್ರ ಹಳೆ ಆಸ್ಪತ್ರೆ ಕಟ್ಟಡದಲ್ಲಿರುವ ಓ.ಟಿ ಮತ್ತು ಐ.ಸಿ.ಯು. ವಿಭಾಗದಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅಳವಡಿಸಲಾಗಿದ್ದ ವಿದ್ಯುತ್ ತಂತಿಗಳು ಹೆಚ್ಚಿನ ಸಂಪರ್ಕದಿಂದಾಗಿ ಸುಟ್ಟುಹೋಗಿದ್ದು, ಓ.ಟಿ. ಮತ್ತು ಐ.ಸಿ.ಯು.ವಿಭಾಗಗಳಿಗೆ ವಿದ್ಯುತ್ ಸಂಪರ್ಕದಲ್ಲಿ ಅಡಚಣೆಯಾಗಿರುತ್ತದೆ. ವಿದ್ಯುತ್ ಸಂಪರ್ಕವನ್ನು ದುರಸ್ಥಿ ಮಾಡಲು ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನರವರಿಗೆ ಕಾರ್ಯಾದೇಶ ನೀಡಿದ್ದು ಸದರಿ ಇಲಾಖೆಯವರು 2014-15ನೇ ಸಾಲಿನ ವಿದ್ಯುತ್ ಮತ್ತು ಸಿವಿಲ್ ದರಸೂಚಿ ಪ್ರಕಾರ ರೂ.48,000.00 ಅಂದಾಜುಪಟ್ಟಿ ಸಲ್ಲಿಸಿ ನಿಯಮಾನುಸಾರ ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ಸದರಿ ಕೆಲಸದ ಮೊತ್ತವನ್ನು ಯೂಸರ್ಸ್ ನಿಧಿಯಿಂದ ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 14 | ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಶಸ್ತ್ರ ಚಿಕಿತ್ಸಾ ಗುಣಮಟ್ಟವನ್ನು ಹೆಚ್ಚಿಸಲು ಆಧುನಿಕ ಸೌಲಭ್ಯ ಒದಗಿಸುವ ಹಿತದೃಷ್ಟಿಯಿಂದ ಲ್ಯಾಪ್ರಸ್ಕೋಪಿ ಯಂತ್ರ ಖರೀದಿಸುವ ಬಗ್ಗೆ. | ಸಂಸ್ಥೆಯ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗದ ಗುಣಮಟ್ಟ ಮತ್ತು ಆಧುನಿಕ ಚಿಕಿತ್ಸಾ ಸೌಲಭ್ಯವನ್ನು ರೋಗಿಗಳಿಗೆ ನೀಡುವ ಹಿತದೃಷ್ಟಿಯಿಂದ ಲ್ಯಾಪ್ರಸ್ಕೋಪಿ ಯಂತ್ರವು ಅವಶ್ಯಕತೆ ಇದ್ದು ಲ್ಯಾಪ್ರಸ್ಕೋಪಿ ಯಂತ್ರದ ಮೂಲಕ ಶಸ್ತ್ರ ಚಿಕಿತ್ಸೆ ಮಾಡುವ ಪರಿಣಿತರು ಸಂಸ್ಥೆಯಲ್ಲಿ ಲಭ್ಯವಿರುತ್ತಾರೆ. ಈ ಉಪಕರಣವನ್ನು ಖರೀದಿಸುವುದರಿಂದ ಗ್ರಾಮೀಣ ಪ್ರದೇಶದವರಿಗೆ, ಬಡವರಿಗೆ ಮತ್ತು ವಿವಿಧ ಯೋಜನೆಗಳ ಅಡಿಯಲ್ಲಿ ಸಂಸ್ಥೆಗೆ ಚಿಕಿತ್ಸೆಗೆ ಬರುವ ರೋಗಿಗಳಿಗೆ ಅತಿ ಕಡಿಮೆ ದರದಲ್ಲಿ ವಿವಿಧ ಶಸ್ತ್ರ ಚಿಕಿತ್ಸೆಗಳ ಸೌಲಭ್ಯವನ್ನು ಒದಗಿಸಬಹುದಾಗಿದ್ದು ಜೊತೆಗೆ ಈ ಉಪಕರಣವನ್ನು ಖರೀದಿಸುವುದರಿಂದ ಯಶಸ್ವಿನಿ ಮತ್ತು ಇತರೆ ಯೋಜನೆಗಳಡಿ ಬರುವ ರೋಗಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶಸ್ತ್ರ ಚಿಕಿತ್ಸೆಗಳನ್ನು ನಡೆಸಬಹುದಾಗಿದ್ದು, ಸಂಸ್ಥೆಯ ಯೂಸರ್ಸ್ ನಿಧಿಗೂ ಸಾಕಷ್ಟು ಆದಾಯ ಬರುತ್ತದೆಂದು ಸಭೆಗೆ ಮನವರಿಕೆ ಮಾಡಿದರು. ಸದರಿ ಉಪಕರಣ ಮತ್ತು ವಿವಿಧ ಬಿಡಿ ಭಾಗಗಳು ಸೇರಿದಂತೆ ರೂ.33.23ಲಕ್ಷ ವೆಚ್ಚವಾಗಲಿದ್ದು ಈ ಉಪಕರಣವನ್ನು ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸಿ ಅಳವಡಿಸಿಕೊಳ್ಳುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ಈ ಉಪಕರಣವನ್ನು ಖರೀದಿಸಿ ಅಳವಡಿಸುವುದರ ಬಗ್ಗೆ ಸಂಸ್ಥೆಯ ಖರೀದಿ ಸಮಿತಿ ಅಧ್ಯಕ್ಷರಿಂದ ಉಪಕರಣ ಖರೀದಿಯ ಬಗ್ಗೆ ಸಾಧಕ-ಬಾಧಕಗಳ ಬಗ್ಗೆ ಅಭಿಪ್ರಾಯ ಪಡೆದು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ |

Finance Officer
Hassan Institute of Medical Sciences
HASSAN

3/11/15

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. |
| 15 | ಸಾರ್ವಜನಿಕ ರೋಗಿಗಳ ಚಿಕಿತ್ಸೆಗಾಗಿ ಕ್ಷ–ಕಿರಣ ವಿಭಾಗಕ್ಕೆ Mamo Compatible Computed Radiography System (ಸಿ.ಆರ್) ಖರೀದಿಸುವ ಬಗ್ಗೆ. | ಸಂಸ್ಥೆಯ ಕ್ಷ–ಕಿರಣ ವಿಭಾಗಕ್ಕೆ ಚಿಕಿತ್ಸೆಗೆ ಬರುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚು ಇರುವುದರಿಂದ ಕಡಿಮೆ ಸಮಯದಲ್ಲಿ ಉತ್ತಮ ಗುಣಮಟ್ಟದ ಎಕ್ಸರೇ ಫಿಲಂಗಳನ್ನು ರೋಗಿಗಳಿಗೆ ನೀಡಲು ಎಕ್ಸ್‌ರೇ ಯಂತ್ರಕ್ಕೆ ಸಿ.ಆರ್. ಉಪಕರಣವನ್ನು (Computed Radiography System) ಅಳವಡಿಸಲು ಮತ್ತು ಹೆಚ್ಚುವರಿಯಾಗಿ ಒಂದು ಕ್ಷ–ಕಿರಣ ಯಂತ್ರದ ಅವಶ್ಯಕತೆ ಇರುತ್ತದೆ. ಇವುಗಳ ಅಂದಾಜು ಬೆಲೆ ರೂ.21.00 ಲಕ್ಷಗಳಾಗುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ಯಂತ್ರಗಳ ಖರೀದಿ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ಸಿ.ಆರ್. ಮತ್ತು ಎಕ್ಸರೇ ಉಪಕರಣವನ್ನು ನಿಯಮಾನುಸಾರ ಇ–ಟೆಂಡರ್ ಮೂಲಕ ಖರೀದಿಸುವುದೆಂದು ತೀರ್ಮಾನಿಸಲಾಯಿತು. |
| 16 | ಸಂಸ್ಥೆಯ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಹಾಲಿ ಇರುವ ಕೇಂದ್ರ ಗ್ರಂಥಾಲಯವನ್ನು ಡಿಜಿಟಲ್ ಲೈಬ್ರರಿಯನ್ನಾಗಿ ಮಾರ್ಪಾಡಿಸುವ ಬಗ್ಗೆ. | ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ಲೈಬ್ರರಿ ಪ್ರಾರಂಭಿಸಲು ಯೋಜನೆ ರೂಪಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯ ಕಾಲೇಜು ಕಟ್ಟಡದಲ್ಲಿ ಹಾಲಿ ಇರುವ ಕೇಂದ್ರ ಗ್ರಂಥಾಲಯ ವಿಭಾಗವನ್ನು ಡಿಜಿಟಲ್ ಲೈಬ್ರರಿಯನ್ನಾಗಿ ಪರಿವರ್ತಿಸಲು ನೆಟ್ ವರ್ಕಿಂಗ್, ಎಲೆಕ್ಟ್ರಿಕಲ್, ಸಾಫ್ಟ್ ವೇರ್, ಹಾರ್ಡ್‌ವೇರ್, ಪಿಠೋಪಕರಣ, ಸಿವಿಲ್ ವರ್ಕ್ ಹಾಗೂ 50 ಕಂಪ್ಯೂಟರ್‌ಗಳು ಸೇರಿದಂತೆ ಸುಮಾರು ರೂ.65.00 ಲಕ್ಷಗಳಿಗೆ ಅಂದಾಜು ಪಟ್ಟಿ ಪಡೆಯಲಾಗಿರುತ್ತದೆ. ಈ ವೆಚ್ಚಕ್ಕೆ ಸರ್ಕಾರದಿಂದ ಪ್ರತ್ಯೇಕ ಅನುದಾನ ಬಿಡುಗಡೆಯಾಗದಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹವಾಗಿರುವ ಕಾಲೇಜು ನಿಧಿಯಿಂದ ಈ ವೆಚ್ಚವನ್ನು ಭರಿಸಬಹುದಾಗಿರುತ್ತದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಡಿಜಿಟಲ್ ಲೈಬ್ರರಿ ಪ್ರಾರಂಭಕ್ಕೆ ಒಪ್ಪಿಗೆ ನೀಡಿ ನಿಯಮಾನುಸಾರ ಇ–ಟೆಂಡರ್ ಕರೆದು ಸದರಿ ವೆಚ್ಚವನ್ನು ಕಾಲೇಜು ನಿಧಿಯಿಂದ ಭರಿಸುವುದರ ಬಗ್ಗೆ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. |
| 17 | ಹಿಮ್ಸ್ ಸಂಸ್ಥೆಯ ಅಧೀನಕ್ಕೊಳಪಟ್ಟಿರುವ ನರ್ಸಿಂಗ್ ಕಾಲೇಜು, ಹೊಳೆನರಸೀಪುರ | ದಿನಾಂಕ:11.07.2014ರಂದು ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯ, ಹೊಳೆನರಸೀಪುರ ಈ ಸಂಸ್ಥೆಯು ಸರ್ಕಾರಿ ಆದೇಶ ಸಂಖ್ಯೆ:ಆಕುಕ 153 ಎಂಎಂಸಿ 2014ರ ಆದೇಶದಂತೆ, |

Finanee Officer
Hassan Institute of Medical Sciences
HASSAN

ನಿರ್ದೇಶಕರು 3/11/15
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ರವರಿಂದ KIADB ಹಾಸನ ರವರಿಗೆ ಜಮೀನಿನ ಕ್ರಯ ಪತ್ರದ ಸಂಬಂಧ ಪಾವತಿಸಬೇಕಾದ ಮೊತ್ತದ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಸ್ತಾಂತರಗೊಂಡಿರುತ್ತದೆ. ಸದರಿ ಕಾಲೇಜು ಪ್ರಾರಂಭಕ್ಕೆ ಅವಶ್ಯಕವಿರುವ 10-00 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ (KIADB) ಹಾಸನರವರಿಂದ ಪಡೆದು ರೂ.19,53,000-00 ಗಳನ್ನು ಪಾವತಿಸಿ ಸರ್ಕಾರಿ ನರ್ಸಿಂಗ್ ಕಾಲೇಜ್, ಹೊಳೆನರಸೀಪುರ ಮತ್ತು KIADB, ಹಾಸನ ಇವರೊಂದಿಗೆ 05 ವರ್ಷಗಳ ಅವಧಿಗೆ Lease cum Sale Agreement ಆಗಿದ್ದು, 5 ವರ್ಷಗಳ ನಂತರ ಪೂರ್ಣ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯ, ಹೊಳೆನರಸೀಪುರ ಪ್ರಾಂಶುಪಾಲರ ಹೆಸರಿಗೆ ನೋಂದಣಿ ಆಗುತ್ತದೆಂದು ಷರತ್ತಿನ ಅಗ್ರಿಮೆಂಟ್ ಆಗಿರುತ್ತದೆ. ಪ್ರಸ್ತುತ ಗುತ್ತಿಗೆ ಕರಾರಿನ ಅವಧಿ ದಿನಾಂಕ:05.02.2013ಕ್ಕೆ ಮುಕ್ತಾಯವಾಗಿದ್ದು, ಈ ಸಂಬಂಧ ರೂ.1,01,064.00 ಗಳನ್ನು ಪಾವತಿಸುವಂತೆ ಸಹಾಯಕ ಕಾರ್ಯದರ್ಶಿ, KIADB, ಹಾಸನರವರು ಪತ್ರ ಸಂಖ್ಯೆ:KIADB/HNP/230/AS/254/2015-16, ದಿನಾಂಕ:12.06.2015ರಲ್ಲಿ ಸೂಚಿಸಿದ್ದು, ಅದರಂತೆ ಈ ಹಣವನ್ನು ಪಾವತಿಸಿ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯ, ಹೊಳೆನರಸೀಪುರ ಪ್ರಾಂಶುಪಾಲರ ಹೆಸರಿಗೆ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ. ಸದರಿ ಮೊತ್ತದ ಪಾವತಿಯು ಕಡ್ಡಾಯವಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಚರ್ಚಿಸಿ ಬಾಕಿ ಇರುವ ಮೊತ್ತ ರೂ.1,01,064.00 ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 18 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶ್ರೀ ಚಾಮರಾಜೇಂದ್ರ ಹಳೆ ಆಸ್ಪತ್ರೆ, ಹೊಸ ಆಸ್ಪತ್ರೆ, ಮತ್ತು ವೈದ್ಯಕೀಯ ಕಾಲೇಜು ಸಮಗ್ರ ನೆಟ್ ವರ್ಕಿಂಗ್ ವ್ಯವಸ್ಥೆಯನ್ನು ಮಾಡಲು 2015-16ನೇ ಸಾಲಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆಗಳ ನೆಟ್ ವರ್ಕಿಂಗ್ ನಿರ್ವಹಣೆಗೆ ಸಂಬಂಧಿಸಿದಂತೆ, 14 ಗಣಕ ಯಂತ್ರಗಳ ನಿರ್ವಹಣೆ/ ಸಾಫ್ಟ್‌ವೇರ್ ನಿರ್ವಹಣೆ/ ಒಳ ರೋಗಿ ಕೇಸ್ ಶೀಟ್/ ಹೊರ ರೋಗಿ ಪುಸ್ತಕ/ ರಶೀದಿಗಳು/ ತಪಾಸಣೆ ಮುದ್ರಿತ ಬೇಡಿಕೆ ಪತ್ರ/ ಪ್ರಿಂಟರ್ ನಿರ್ವಹಣೆ/ ಮತ್ತು 18 ಸಿಬ್ಬಂದಿಗಳ ವೇತನ ವೆಚ್ಚ ಸೇರಿದಂತೆ ಮಾಸಿಕ ಟೆಂಡರ್ ಮೊತ್ತ ರೂ.2,32,000-00 ಗಳಿಗೆ ಮೆ. ಕೋನಿ ಟೆಕ್ನಾಲಜಿಸ್, ಬೆಂಗಳೂರು ಇವರಿಗೆ 2008-09 ರಿಂದ 2010-11ರವರೆಗೆ ಮೂರು ವರ್ಷಗಳ ಅವಧಿಗೆ ಕಾರ್ಯಾದೇಶ ನೀಡಿದ್ದು 09-09-2011ಕ್ಕೆ ಟೆಂಡರ್ ಅವಧಿಯು ಪೂರ್ಣಗೊಂಡಿರುತ್ತದೆ.<br>ದಿನಾಂಕ:29-08-2011ರಂದು ನೆಟ್-ವರ್ಕಿಂಗ್ ನಿರ್ವಹಣೆಗೆ ಸಂಬಂಧಿಸಿದಂತೆ |

Finanee Officer
Hassan Institute of Medical Sciences
HASSAN

ನಿರ್ದೇಶಕರು 3/11/15
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಟೆಂಡರ್ ಕರೆಯಲಾಗಿದ್ದು ಭಾಗವಹಿಸಿದ್ದ ಟೆಂಡರ್‌ದಾರರ ಆಕ್ಷೇಪಣೆಗಳಿಂದಾಗಿ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳದೆ ಸ್ಥಗಿತಗೊಂಡಿರುತ್ತದೆ. ದಿನಾಂಕ: 13.06.2014 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ಕರ್ನಾಟಕ ಸರ್ಕಾರದ ಅಧಿಕೃತ ನೆಟ್ ವರ್ಕಿಂಗ್ ಸೇವೆಯನ್ನು ಒದಗಿಸುವ ಎನ್.ಐ.ಸಿ ಸಂಸ್ಥೆಯಿಂದ ನೆಟ್‌ವರ್ಕಿಂಗ್ ಅಳವಡಿಸಿಕೊಳ್ಳಲು ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಸದರಿ ತೀರ್ಮಾನದಂತೆ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಎಲ್ಲಾ ಸಂಸ್ಥೆಗಳ ಆಡಳಿತಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲು ಕ್ರಮ ವಹಿಸುವಂತೆ ಎನ್.ಐ.ಸಿ ಸಂಸ್ಥೆಯವರಿಗೆ ಪತ್ರ ಬರೆಯಲಾಗಿದ್ದರೂ ಸದರಿ ಸಂಸ್ಥೆಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.<br>ಇದೇ ವಿಚಾರವಾಗಿ ದಿನಾಂಕ:17-11-2014ರಂದು ನಡೆದ ಆಡಳಿತ ಮಂಡಳಿ ಸಭೆಯೂ ಸಹ ಇದೇ ವಿಷಯವು ಪುನರ್ ಪ್ರಸ್ತಾವಿತವಾಗಿದ್ದು 2008-09ನೇ ಸಾಲಿನಿಂದಲೂ ಒಂದೇ ಸಂಸ್ಥೆಯನ್ನು ಮುಂದುವರೆಸುತ್ತಾ ಬಂದಿರುವುದು ಆಡಿಟ್ ಆಕ್ಷೇಪಣೆಗೆ ಗುರಿಯಾಗುವುದರಿಂದ 2015-16ನೇ ಸಾಲಿನಿಂದ ಹೊಸದಾಗಿ ಟೆಂಡರ್ ಕರೆಯುವಂತೆ ತೀರ್ಮಾನಿಸಿ ಅಲ್ಲಿಯವರೆಗೂ ಅಂದರೆ 30.03.2016ರವರೆಗೂ ಹಾಲಿ ಟೆಂಡರ್‌ದಾರರ ಸೇವೆಯನ್ನು ಮುಂದುವರೆಸುವಂತೆ ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ನೆಟ್ ವರ್ಕಿಂಗ್ ಅಳವಡಿಕೆಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ನೆಟ್‌ವರ್ಕಿಂಗ್ ವ್ಯವಸ್ಥೆಯನ್ನು ಎನ್.ಐ.ಸಿ. ಸಂಸ್ಥೆಯ ಮುಖಾಂತರ ಮಾಡಿಸುವುದರಿಂದ ಸಂಸ್ಥೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ, ಮಾನ್ಯ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಎನ್.ಐ.ಸಿ ಸಂಸ್ಥೆಗೆ ಜಿಲ್ಲಾಧಿಕಾರಿಗಳ ನೆರವಿನಿಂದ ಶಿಫಾರಸ್ಸು ಮಾಡಿಸಿ ಅಗತ್ಯ ಕೆಲಸವನ್ನು ಮಾಡಿಸಿಕೊಳ್ಳುವುದು ಸೂಕ್ತವೆಂದು ತೀರ್ಮಾನಿಸಲಾಯಿತು. |
| 19 | ಹೊಸ ಬೋಧಕ ಆಸ್ಪತ್ರೆ ಕಟ್ಟಡದ ಸೆಲ್ಲರ್‌ನಲ್ಲಿರುವ ಉಪಹಾರ ಮಂದಿರಕ್ಕೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಉಪಹಾರ ಮಂದಿರಕ್ಕೆ ಸ್ಥಳಾವಕಾಶ ಮಾಡಲಾಗಿದೆ, ಉಪಹಾರ ಮಂದಿರಕ್ಕೆ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಊಟ ಮತ್ತು ತಿಂಡಿಗಳಲ್ಲಿ |

Finance Officer
Hassan Institute of Medical Sciences
HASSAN

ನಿರ್ದೇಶಕರು 3/11/15
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಉತ್ತಮವಾದ ಗುಣಮಟ್ಟ ಮತ್ತು ಸ್ವಚ್ಛತೆಗೆ ಪ್ರಧ್ಯಾನತೆ ನೀಡುವುದು ಬಹು ಮುಖ್ಯವಾಗಿದ್ದು ಗುಣಮಟ್ಟ ನೀಡುವ ಉಪಹಾರ ಮಂದಿರಗಳನ್ನು ಟೆಂಡರ್‌ಗೆ ಆಹ್ವಾನಿಸಲು ತೀರ್ಮಾನಿಸಲಾಯಿತು. ಟೆಂಡರ್ ಪ್ರಕ್ರಿಯೆಯನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಪ್ರಾರಂಭಿಸಿ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಹೊಂದಿದಲ್ಲಿ ಮಾತ್ರ ಆರ್ಥಿಕ ಬಿಡ್ ತೆರೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವುದೆಂದು ತೀರ್ಮಾನಿಸಲಾಯಿತು. |
| 20 | ಯಶಸ್ವಿನಿ ಯೋಜನೆ ಮತ್ತು ವಿವಿಧ ಆರೋಗ್ಯ ಯೋಜನೆಗಳ ಕೆಲಸ ನಿರ್ವಹಿಸಲು 03 ಜನ ಡಾಟಾ ಎಂಟ್ರಿಆಪರೇಟರ್‌ಗಳನ್ನು ಕ್ರೋಢೀಕೃತ ವೇತನದಡಿಯಲ್ಲಿ ನೇಮಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ವಿವಿಧ ಆರೋಗ್ಯ ಯೋಜನೆಗಳ ಕೆಲಸವನ್ನು ಆನ್ - ಲೈನ್ ಮುಖಾಂತರ ನಿರ್ವಹಿಸಬೇಕಾಗಿರುವುದರಿಂದ 03 ಜನ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನಿಯೋಜನೆ ಮಾಡುವಂತೆ ವಿಭಾಗದ ಆಡಳಿತಾಧಿಕಾರಿಗಳು ಸಲ್ಲಿಸಿದ್ದ ಮನವಿಯನ್ನು ದಿನಾಂಕ:16.06.2015ರಂದು ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಚರ್ಚಿಸಿ ಕ್ರೋಢೀಕೃತ ವೇತನದಡಿಯಲ್ಲಿ ಹೊರ ಸಂಪನ್ಮೂಲದ ಮೂಲಕ ನೇಮಕ ಮಾಡಿಕೊಳ್ಳಲು ಸದರಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಈ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದರ ಬಗ್ಗೆ ಮತ್ತು 03 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯವನ್ನು ಚರ್ಚಿಸಿ ಸಂಸ್ಥೆಗೆ ಮಂಜೂರಾಗಿರುವ ಹುದ್ದೆಗಳಲ್ಲಿ ಈ ಹುದ್ದೆಗಳು ಖಾಲಿ ಇರುವ ಬಗ್ಗೆ ಪರಿಶೀಲಿಸಿ ಖಾಲಿ ಇದ್ದಲ್ಲಿ ಮಾತ್ರ 03 ಡಾಟಾ ಎಂಟ್ರಿಆಪರೇಟರ್‌ಗಳನ್ನು ಕ್ರೋಢೀಕೃತ ವೇತನದಡಿಯಲ್ಲಿ ನೇಮಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. |
| 21 | ಸಂಸ್ಥೆಯ ರೇಡಿಯಾಲಜಿ ವಿಭಾಗಕ್ಕೆ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಸುವ ಬಗ್ಗೆ. | ಸಂಸ್ಥೆಯಲ್ಲಿ 10 ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭಿಸುವ ಸಲುವಾಗಿ ಎಮ್.ಸಿ.ಐ. ನವದೆಹಲಿ ಇವರಿಂದ ಪರಿವೀಕ್ಷಣೆ ನಡೆದಿದ್ದು ಎಮ್.ಸಿ.ಐ. ನವದೆಹಲಿಯವರು ಸಲ್ಲಿಸಿರುವ ವರದಿಗಳ ವಿಷಯಗಳ ಪೈಕಿ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಸಿಲ್ಲವೆಂಬುವುದು ಸಹ ಒಂದು ಆಕ್ಷೇಪಣೆಯಾಗಿರುತ್ತದೆ. ಸಂಸ್ಥೆ ವತಿಯಿಂದ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರವನ್ನು ಖರೀದಿಸಿದ್ದಲ್ಲಿ ಸುಮಾರು ರೂ.500.00 ಲಕ್ಷ ಅನುದಾನದ ಅವಶ್ಯಕತೆಯ ಜೊತೆಗೆ ರೇಡಿಯಾಲಜಿಸ್ಟ್ ಹುದ್ದೆಗಳನ್ನು ಸಹ ಭರ್ತಿ ಮಾಡಬೇಕಾಗುತ್ತದೆ. ಈಗಾಗಲೇ ರೇಡಿಯಾಲಜಿಸ್ಟ್ ಹುದ್ದೆಯ ನೇಮಕಾತಿಗೆ ಹಲವಾರು ಬಾರಿ ನೇರ ಸಂದರ್ಶನ ಕರೆದಿದ್ದರೂ ಸಹ ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿರುತ್ತದೆ. |

Finanee Officer
Hassan Institute of Medical Sciences
HASSAN

3/11/15

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಈ ನಿಟ್ಟಿನಲ್ಲಿ ಎಮ್.ಸಿ.ಐ. ಆಕ್ಷೇಪಣೆ ಸರಿಪಡಿಸುವುದರ ಜೊತೆಗೆ ರೋಗಿಗಳಿಗೆ ಇನ್ನು ಹೆಚ್ಚಿನ ಸೇವೆಯನ್ನು ಕಲ್ಪಿಸುವ ಹಿತದೃಷ್ಟಿಯಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಪಿ.ಪಿ.ಪಿ ಮೂಲಕ ಎಮ್.ಆರ್.ಐ. ಯಂತ್ರವನ್ನು ಅಳವಡಿಸಿಕೊಂಡಲ್ಲಿ ಸಂಸ್ಥೆಗೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ ಮತ್ತು ಪಿ.ಪಿ.ಪಿ ಪಡೆಯುವ ಸಂಸ್ಥೆಯವರೇ ರೇಡಿಯಾಲಜಿಸ್ಟ್‌ಗಳನ್ನು ನೇಮಕ ಮಾಡಿಕೊಳ್ಳುವುದರಿಂದ ರೇಡಿಯಾಲಜಿಸ್ಟ್ ಹುದ್ದೆಗಳ ಕೊರತೆಯನ್ನು ನೀಗಿಸುವುದರ ಜೊತೆಗೆ ಸಾರ್ವಜನಿಕರಿಗೆ ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಮಿತಿಯು ಬೆಳಗಾಂ, ಮೈಸೂರು, ಶಿವಮೊಗ್ಗ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲ್ಲಿ ಈಗಾಗಲೇ ಪಿ.ಪಿ.ಪಿ ಮೂಲಕ ಸಿ.ಟಿ.ಸ್ಕ್ಯಾನ್ ಮತ್ತು ಎಮ್.ಆರ್.ಐ. ಸ್ಕ್ಯಾನ್‌ಗಳನ್ನು ಅಳವಡಿಸಿಕೊಂಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಚರ್ಚಿಸಿ ಪಿ.ಪಿ.ಪಿ. ವಿಷಯದ ಬಗ್ಗೆ ಮಾಹಿತಿಯನ್ನು ಪಡೆದು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. |
| 22 | ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಯೋಜನೆಯಡಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಾತ್ರ ಸೌಲಭ್ಯ ನೀಡುತ್ತಿದ್ದು ನರ್ಸಿಂಗ್ ಶಾಲೆ ವಿದ್ಯಾರ್ಥಿಗಳು ತಮಗೂ ಸೌಲಭ್ಯ ವಿಸ್ತರಿಸಬೇಕೆಂದು ಕೋರಿರುವ ಬಗ್ಗೆ ಚರ್ಚೆ ಹಾಗೂ ತೀರ್ಮಾನ. | ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಎಮ್.ಬಿ.ಬಿ.ಎಸ್. ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಸರ್ಕಾರದ ಮಾರ್ಗ ಸೂಚಿಯಂತೆ ವಿದ್ಯಾರ್ಥಿ ವೇತನ, ಲ್ಯಾಪ್‌ಟಾಪ್, ಪ್ರಿಂಟರ್, ಪೆನ್‌ಡ್ರೈವ್, ಎಪ್ರಾನ್, ಟೇಬಲ್ ಲ್ಯಾಂಪ್, ವೈದ್ಯಕೀಯ ಪುಸ್ತಕಗಳು ಮತ್ತು ಕ್ಯಾಷ್ ಪ್ರೈಸ್ ನೀಡಲಾಗುತ್ತಿದೆ.<br>ಸಂಸ್ಥೆಯ ಅಧೀನದಲ್ಲಿ ಬರುವ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ ಹಾಸನ ಮತ್ತು ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ ಹೊಳೆನರಸೀಪುರ ಇಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಹ ನಮಗೂ ಈ ಸೌಲಭ್ಯವನ್ನು ಒದಗಿಸಿಕೊಡುವಂತೆ ಮನವಿ ಮಾಡಿದ್ದು ಸದರಿ ಸೌಲಭ್ಯವನ್ನು ನರ್ಸಿಂಗ್ ವಿದ್ಯಾರ್ಥಿಗಳಿಗೂ ವಿಸ್ತರಿಸಬಹುದೇ ಎಂಬುದರ ಬಗ್ಗೆ ಯಾವುದೇ ಮಾರ್ಗಸೂಚಿಗಳು ಇಲ್ಲದಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಈ ಯೋಜನೆಯು ಮೂಲತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಜಾರಿಗೊಳಿಸಲಾಗಿದ್ದರೂ ನರ್ಸಿಂಗ್ ವಿದ್ಯಾರ್ಥಿಗಳ |

Finance Officer
Hassan Institute of Medical Sciences
HASSAN

3/11/14
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮನವಿಯನ್ನು ಸಹ ಪರಿಗಣಿಸಿ ಲ್ಯಾಪ್‌ಟಾಪ್, ಪ್ರಿಂಟರ್, ಪೆನ್‌ಡ್ರೈವ್ ಹೊರತು ಪಡಿಸಿ ಕಡಿಮೆ ವೆಚ್ಚದ ಉಳಿದ ಸಾಮಾಗ್ರಿಗಳಾದ ಎಪ್ರಾನ್, ಟೇಬಲ್ ಲ್ಯಾಂಪ್, ನರ್ಸಿಂಗ್ ಪುಸ್ತಕಗಳನ್ನು ನೀಡಬಹುದೆಂದು ತೀರ್ಮಾನಿಸಲಾಯಿತು. |
| 23 | ಸಿ.ಟಿ ಸ್ಕ್ಯಾನ್ ಪರೀಕ್ಷೆಗೆ ದರ ನಿಗದಿಪಡಿಸುವ ಬಗ್ಗೆ. | ವಿವಿಧ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಿ.ಟಿ. ಸ್ಕ್ಯಾನ್ ಪರೀಕ್ಷೆಗೆ ನಿಗದಿಪಡಿಸಿರುವ ಶುಲ್ಕದ ವಿವರವನ್ನು ಸಭೆಯಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಸಿ.ಟಿ. ಸ್ಕ್ಯಾನ್ ಪರೀಕ್ಷೆಗೆ ದರವನ್ನು ನಿಗದಿಪಡಿಸುವುದೆಂದು ತೀರ್ಮಾನಿಸಲಾಯಿತು. |

| Sl. NO. | Part | BPL | APL |
|---|---|---|---|
| 1 | Head | 500.00 | 1000.00 |
| 2 | Spine | 500.00 | 1000.00 |
| 3 | Facial Bone | 500.00 | 1000.00 |
| 4 | Thorax | 500.00 | 1000.00 |
| 5 | Abdomen | 500.00 | 1000.00 |
| 6 | Pelvis | 500.00 | 1000.00 |
| 7 | Extremity | 500.00 | 1000.00 |

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 24 | 307 ಬೋಧಕೇತರ ಸಿಬ್ಬಂದಿ ನೇಮಕಾತಿ ಸಂಬಂಧ ಗಣಕೀಕೃತಗೊಳಿಸಿದ ಬಾಕಿ ಬಾಬ್ತನ್ನು ಮೆ.ಕೋನಿ ಟೆಕ್ನಾಲಜಿರವರಿಗೆ ಪಾವತಿ ಮಾಡುವ ಬಗ್ಗೆ. | ದಿನಾಂಕ:09-9-2009ರಂದು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕೇತರ ಸಿಬ್ಬಂದಿ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಾಧಿಕಾರದ ಸಭೆಯ ತೀರ್ಮಾನದಂತೆ, ಡ್ರೈವರ್, ಡಿಸೆಕ್ಷನ್ ಹಾಲ್ ಅಟೆಂಡರ್, ಲ್ಯಾಬ್ ಅಸಿಸ್ಟೆಂಟ್ ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗಿರುತ್ತದೆ. ಪರೀಕ್ಷೆ ಹಾಗೂ ಇತರೆ ಕೆಲಸಗಳನ್ನು ಅಂದರೆ<br>Separation of Applications and Photographs/ Scanning and attachment of candidates photographs/ Printing of Hall tickets and Printing of address sheets / Entry of Examination Marks to the software/ Generation and Printing of Merit list/Announcement of Examination Notification / Interview notification/Cut-off percentage all 24 posts / Selection list all 24 posts ನಿರ್ವಹಿಸಲು ದರಪಟ್ಟಿ ಕರೆದು ಮೆ.ಕೋನಿ ಟೆಕ್ನಾಲಜೀಸ್, ಬೆಂಗಳೂರುರವರಿಗೆ ಈ ಕೆಲಸವನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿತ್ತು. ಸದರಿ ಕೆಲಸವನ್ನು ಏಜೆನ್ಸಿಯವರು ಪೂರ್ಣಗೊಳಿಸಿ ರೂ.1,87,000.00ಗಳಿಗೆ ಬಿಲ್ ಸಲ್ಲಿಸಿದ್ದು ಬಿಲ್ ಪಾವತಿಯಾಗದೆ ಬಾಕಿ ಇರುವುದರಿಂದ |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ಏಜೆನ್ಸಿರವರು ಬಿಲ್ ಪಾವತಿ ಮಾಡುವಂತೆ ಪದೇ ಪದೇ ಮನವಿ ಸಲ್ಲಿಸುತ್ತಿದ್ದಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಚರ್ಚಿಸಿ ಸಂಬಂಧಿಸಿದ ಏಜೆನ್ಸಿಯವರನ್ನು ಕರೆಸಿ ದರ ಸಂಧಾನದ ಮೂಲಕ ಬಿಲ್ ಮೊತ್ತವನ್ನು ಕಡಿಮೆ ಮಾಡಿ ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 25 | ಶುಶ್ರೂಷಾ ಮಹಾವಿದ್ಯಾಲಯ ಹೊಳೆನರಸೀಪುರ ಇಲ್ಲಿನ ಕಛೇರಿ /ಆಡಳಿತ ಕೆಲಸವನ್ನು ನಿರ್ವಹಿಸುತ್ತಿರುವ ನಿವೃತ್ತ ಹಿರಿಯ ಆರೋಗ್ಯ ಸಹಾಯಕರಾದ ಶ್ರೀ.ಹೆಚ್.ಎಸ್. ರಾಜೇಗೌಡರವರ ವೇತನ ಪರಿಷ್ಕರಿಸುವ ಬಗ್ಗೆ. | ಸಂಸ್ಥೆಯ ಅಧೀನದಲ್ಲಿ ಬರುವ ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯ, ಹೊಳೆನರಸೀಪುರ, ಇಲ್ಲಿಗೆ ಸರ್ಕಾರದಿಂದ ಏಳು ಲಿಪಿಕ ಹುದ್ದೆಗಳು ಹಾಗೂ ಒಂದು ಕಛೇರಿ ಅಧೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, ದಿನಾಂಕ: 01.12.2013 ರಿಂದ ಎಲ್ಲಾ ಹುದ್ದೆಗಳು ಖಾಲಿ ಇದ್ದು ಕಾಲೇಜಿನ ಆಡಳಿತ ಕೆಲಸಗಳಿಗೆ ತುಂಬಾ ತೊಂದರೆ ಆಗಿದ್ದರಿಂದ ದಿನಾಂಕ: 01.12.2013 ರಿಂದ ಶ್ರೀ.ಹೆಚ್.ಎಸ್.ರಾಜೇಗೌಡ, ನಿವೃತ್ತ ಹಿರಿಯ ಆರೋಗ್ಯ ಸಹಾಯಕ ಇವರ ಸೇವೆಯನ್ನು ಹೊರಗುತ್ತಿಗೆ ಮುಖಾಂತರ ಪಡೆದು ಪ್ರಸ್ತುತ ಮಾಸಿಕ ಸಂಭಾವನೆ ರೂ.5,030.00 ಪಾವತಿಸಲಾಗುತ್ತಿದೆ.<br>ಸಂಸ್ಥೆಯಿಂದ ಪಾವತಿಸುವ ವೇತನದಲ್ಲಿ ಖರ್ಚನ್ನು ಭರಿಸಲು ತುಂಬಾ ಕಷ್ಟವಾಗುತ್ತಿದೆ ವೇತನವನ್ನು ಪರಿಷ್ಕರಿಸದಿದ್ದಲ್ಲಿ ಕೆಲಸವನ್ನು ಬಿಡುವುದಾಗಿ ತಿಳಿಸಿರುತ್ತಾರೆಂದು ಸದರಿಯವರು RGUHS, KSDNEB ಹಾಗೂ ಇತರೆ ಕಛೇರಿ ಕೆಲಸವನ್ನು ಇವರೇ ನಿರ್ವಹಿಸುತ್ತಿದ್ದು ಸಂಸ್ಥೆಯನ್ನು ಬಿಟ್ಟಲ್ಲಿ ದೈನಂದಿನ ಕಛೇರಿ ಕೆಲಸಗಳಿಗೆ ತುಂಬಾ ಕಷ್ಟಕರವಾಗುತ್ತದೆ ಎಂದು ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರು ಮನವಿ ಮಾಡಿಕೊಂಡಿರುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ವಿಷಯವನ್ನು ಚರ್ಚಿಸಿ ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯ, ಹೊಳೆನರಸೀಪುರ, ಇಲ್ಲಿ ಕಛೇರಿ ಕೆಲಸ ನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇರುವುದನ್ನು ಪರಿಗಣಿಸಿ ಮಾಹೆಯಾನ ಕ್ರೋಢೀಕೃತ ವೇತನ ರೂ.10,000.00 (ಹತ್ತು ಸಾವಿರ ರೂಗಳು) ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 26 | ಪಾವತಿಸಲು ಬಾಕಿ ಇರುವ ವೈದ್ಯಕೀಯ ಉಪಕರಣಗಳ ಬಿಲ್ ಪಾವತಿ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಗೆ 2009-10ನೇ ಸಾಲಿನಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಡಯಾಲಿಸಿಸ್ ಘಟಕ ಮತ್ತು ಸುಟ್ಟಗಾಯಗಳ ಚಿಕಿತ್ಸೆಗಾಗಿ ವಾರ್ಡ್‌ಗಳನ್ನು ಸ್ಥಾಪಿಸುವ ಸಲುವಾಗಿ ರೂ.65.00 ಲಕ್ಷ ಅನುದಾನ ಬಿಡುಗಡೆಯಾಗಿತ್ತು. ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮಾಡಿ ಅವಶ್ಯಕವಾಗಿ ಬೇಕಾಗಿದ್ದ ಉಪಕರಣಗಳನ್ನು ಖರೀದಿಸಲಾಗಿದೆ. ಈ ಉಪಕರಣಗಳ |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಖರೀದಿಯ ಪೈಕಿ Anaesthesia work Station, ಸರಬರಾಜು ಮಾಡಲು M/s H.L. Medical System Pvt, Ltd., Link Road, Malad west Mumbai ಮತ್ತು ICU cot ಗಳನ್ನು ಸರಬರಾಜು ಮಾಡಲು M/s, Hospitech Bangalore ಇವರಿಗೆ ಸರಬರಾಜು ಆದೇಶ ನೀಡಲಾಗಿತ್ತು. ಆದರೆ ಸದರಿ ಸಂಸ್ಥೆಯವರು ನಿಗದಿತ ವೇಳೆಗೆ ಸದರಿ ಉಪಕರಣವನ್ನು ಸರಬರಾಜು ಮಾಡಿರುವುದಿಲ್ಲ. ಅಲ್ಲದೆ ಸ್ಪೆಸಿಫೀಕೆಷನ್‌ಗೆ ಅನುಗುಣವಾಗಿಲ್ಲದೆ ಇದ್ದ ಉಪಕರಣಗಳನ್ನು ಸರಬರಾಜು ಮಾಡಿದ್ದರಿಂದ ವಾಪಸ್ಸು ನೀಡಿ ಸ್ಪೆಸಿಫೀಕೆಷನ್‌ಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಉಪಕರಣವನ್ನು ಸರಬರಾಜು ಮಾಡಬೇಕೆಂದು ತಿಳಿಸಲಾಗಿರುತ್ತದೆ.<br>ಸಂಸ್ಥೆಯಿಂದ ಸರಬರಾಜು ಆದೇಶ ನೀಡಿ ಒಂದು ವರ್ಷ ಕಳೆದರೂ ಸರಬರಾಜು ಮಾಡದೇ ಇದ್ದ ಕಾರಣ ಹಲವಾರು ಬಾರಿ ನೆನಪೋಲೆಗಳನ್ನು ಕಳುಹಿಸಿದ್ದರೂ ಅವರು ಸರಬರಾಜು ಮಾಡಿರುವುದಿಲ್ಲ ನಂತರ ದಿನಾಂಕ:07-02-2011ರಂದು ಉಪಕರಣಗಳನ್ನು ಸರಬರಾಜು ಮಾಡಿ ಬಿಲ್ ಪಾವತಿಗೆ ಸಲ್ಲಿಸಿರುತ್ತಾರೆ. ಖಜಾನೆ ಚೆಕ್ ಅವಧಿಯು ಒಂದು ವರ್ಷದವರಿಗೆ ಮಾತ್ರ ಇದ್ದು ಚೆಕ್‌ನ ಅವಧಿ ಮುಗಿದ ಕಾರಣ ಮತ್ತು ಆರ್ಥಿಕ ವರ್ಷದ ಅಂತ್ಯವಾದ್ದರಿಂದ ಬಿಡುಗಡೆಯಾದ ಅನುದಾನ ಸರ್ಕಾರಕ್ಕೆ ವಾಪಸ್ ಆಗಿರುತ್ತದೆ.<br>ದಿನಾಂಕ:29.05.2013 ಮತ್ತು 18.06.2013ರಲ್ಲಿ ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದು ಸರ್ಕಾರಕ್ಕೆ ವಾಪಾಸ್ಸಾಗಿರುವ ರೂ.13,78,574.00 ಅನುದಾನವನ್ನು ಬಿಡುಗಡೆ ಮಾಡುವಂತೆ ಪತ್ರ ಬರೆಯಲಾಗಿರುತ್ತದೆ. ಪುನ: ದಿನಾಂಕ: 06.02.2015ರಂದು ಸದರಿ ಉಪಕರಣಗಳ ಖರೀದಿ ಸಂಬಂಧ ಪಾವತಿಸಲು ಬಾಕಿ ಇರುವ ಬಿಲ್ ಬಾಬ್ತು ರೂ. ರೂ.13,78,574.00ನ್ನು ಬಿಡುಗಡೆ ಮಾಡುವಂತೆ ಕೋರಿ ಮತ್ತೊಮ್ಮೆ ಪತ್ರ ಬರೆದಿದ್ದು ದಿನಾಂಕ:27.03.2013ರಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಪತ್ರ ಸಂಖ್ಯೆ:ಜೆ.ಡಿ.ಎಂ., ಎಂ.ಡಿ.ಪಿ./55/2014-15ರಲ್ಲಿ ನಿಗದಿಪಡಿಸಿದ ಅನುದಾನ ಬಿಡುಗಡೆಯಾಗದಿದ್ದುದರಿಂದ ರೂ.13,78,574.00ನ್ನು ಸಂಸ್ಥೆಯ ಆರೋಗ್ಯ ರಕ್ಷಾ ಸಮಿತಿ ನಿಧಿಯಿಂದ ಭರಿಸಲು ಆದೇಶ ನೀಡಿರುತ್ತಾರೆ. ಈ ಹಣವನ್ನು ಪಾವತಿಸುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಸರ್ಕಾರದಿಂದ ವಿಶೇಷ ಅಭಿವೃದ್ಧಿ ಯೋಜನೆಯಡಿ ಡಯಾಲಿಸಿಸ್ ಘಟಕ ಮತ್ತು ಸುಟ್ಟ ಗಾಯಗಳ ಚಿಕಿತ್ಸೆಗಾಗಿ |

Finance Officer
Hassan Institute of Medical Sciences
HASSAN



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಬಿಡುಗಡೆಯಾಗಿರುವ ಅನುದಾನದಲ್ಲಿ ನಿಯಮಾನುಸಾರ ಉಪಕರಣಗಳನ್ನು ಖರೀದಿಸಲಾಗಿದೆಯೇ ಮತ್ತು ಎಲ್ಲಾ ಉಪಕರಣಗಳು ಸ್ವೀಕೃತಗೊಂಡಿವಿಯೇ ಮತ್ತು ಅವುಗಳ ಕಾರ್ಯಸ್ಥಿತಿ ಹೇಗಿದೆ ಎಂಬ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸರ್ಕಾರದಿಂದ ಒಂದು ಉಪ ಸಮಿತಿಯನ್ನು ರಚಿಸುವುದೆಂದು ತೀರ್ಮಾನಿಸಿ ಸದರಿ ಸಮಿತಿಯ ರಚನೆಗಾಗಿ ಪ್ರಸ್ತಾವನೆಯನ್ನು ಏಕ ಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸುವಂತೆ ಹಿಮ್ಸ್ ನಿರ್ದೇಶಕರಿಗೆ ಸೂಚಿಸಿಲಾಯಿತು. |
| 27 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | |
| 27(ಅ) | MDRTB ರೋಗಿಗಳ ಚಿಕಿತ್ಸೆಗೆ ಅನುಕೂಲವಾಗಲು CBNAAT ಯಂತ್ರದ ಸ್ಥಾಪನೆ ಮಾಡಲು ಅನುಮತಿ ಅನುಷ್ಠಾನ ಪೂರ್ವ ಕಾಮಗಾರಿಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ. | ಜಿಲ್ಲಾ ಕ್ಷಯ ರೋಗ ನಿಯಂತ್ರಣ ಕೇಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಮತ್ತು ಜಂಟಿ ನಿರ್ದೇಶಕರು, CWSTC ಬೆಂಗಳೂರು ಇವರು ಹಾಸನ ಜಿಲ್ಲೆಯಲ್ಲಿ ಕ್ಷಯ ರೋಗಿಗಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯ ಒದಗಿಸಲು ಅಂದಾಜು ರೂ.15.00 ರಿಂದ 20.00 ಲಕ್ಷಗಳ ಬೆಲೆ ಬಾಳುವ CBNAAT ಯಂತ್ರವನ್ನು ಸ್ಥಾಪನೆ ಮಾಡಲು ಹೊಸ ಬೋಧನಾ ಆಸ್ಪತ್ರೆಯಲ್ಲಿ ಸ್ಥಳಾವಕಾಶ ನೀಡುವಂತೆಯೂ ಮತ್ತು ಈ ಯಂತ್ರ ಸ್ಥಾಪನೆಗಾಗಿ ಅನುಷ್ಠಾನ ಪೂರ್ವ ಕಾಮಗಾರಿಗೆ ರೂ. 4.5ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರು, ಸಭೆಯಲ್ಲಿ ಮಂಡಿಸಿದರು ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಿಂದ ಜಿಲ್ಲಾ ಕ್ಷಯ ರೋಗಿಗಳಿಗೆ ಹೆಚ್ಚಿನ ಉಪಯೋಗವಾಗುವುದೆಂದು ಪರಿಗಣಿಸಿ ಕಾಮಗಾರಿಗೆ ರೂ.4.5 ಲಕ್ಷವನ್ನು ನೀಡಬಹುದೆಂದು ಒಪ್ಪಿ ಈ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಪಾವತಿಸಲು ಸಂಸ್ಥೆಯ ಆಡಳಿತ ಮಂಡಳಿಯಿಂದ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು.<br>'ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು', |

3/11/2015

ಆರ್ಥಿಕ ಅಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.
Finanee Officer
Hassan Institute of Medical Sciences
HASSAN

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ,
ಹಾಗೂ ಅಧ್ಯಕ್ಷರು,ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.
M. LAKSHMINARAYANA. IAS
Principal Secretary to Government
Health and Family Welfare Department
(Medical Education)